**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ  ಮಿಸ್ 60/2023**

ಪಿ ಡಬ್ಲ್ಯೂ-1

**ದಿನಾಂಕ 10-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ ಎಮ್.ಸಿ.ಎಸ್.  ಎದುರುದಾರರ ಪರ ವಕೀಲರುಃ**

ನಮ್ಮ ಮಾವನ ಹೆಸರು ನಾಗರಾಜು. ಎದುರುದಾರರ ತಂದೆ ನಾಗರಾಜು ರವರಿಗೆ ಒಟ್ಟು 3 ಜನ ಮಕ್ಕಳು. 3 ಜನ ಮಕ್ಕಳಿಗೂ ಸಹ ಆಸ್ತಿಯಲ್ಲಿ ಸಮಾನ ಹಕ್ಕು ಇದೆ ಎಂದರೇ ಸರಿ. ನನ್ನ ಮತ್ತು ಎದುರುದಾರರ ನಡುವೆ ವಿವಾಹವು 2019 ರಲ್ಲಿ ನಡೆದಿದೆ. ನಿಪಿ-26 ರಲ್ಲಿರುವ ಚಿನ್ನದ ರಸೀದಿಯು 2013 ನೇ ಇಸವಿಯದು ಎಂದರೆ ಸರಿ. ಸದರಿ ರಸೀದಿಯು ನನ್ನ ಮತ್ತು ಎದುರುದಾರರ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆಯ ಹೆಸರಿನಲ್ಲಿದೆ.  ನಾನು ಹಾಜರು ಪಡಿಸಿರುವ ಮತ್ತೊಂದು ಬೆಳ್ಳಿ ಖರೀದಿಯ ರಸೀದಿಯ ದಿಃ 26-11-2015 ರದ್ದು ಎಂದರೇ ಸರಿ.

**2**. ವೆಂಕಟೇಶ ಜುವ್ಯೆಲರ್ಸ ರವರ ಸಲ್ಲಿಸಿರುವ ರಸೀದಿಯು ದಿಃ 11-10-2014 ರಂದು ಎಂದರೆ ಸರಿ. 2014 ನೇ ಇಸವಿಯಲ್ಲಿಯೇ ತಾಳಿಯನ್ನು ಮಾಡಿಸಿದ್ದಾರೋ ಇಲ್ಲಮೋ ಎಂದು ನನಗೆ ಗೊತ್ತಿಲ್ಲ. 2014 ರಂದು ಗುಂಡು ಮಾಡಿಸಿದ್ದು ಅದು ನನ್ನ ಬಳಿಯೇ ಇದೆ. ನನ್ನ ಬಳಿ ಈಗ ಪ್ರಸ್ತುತ ಯಾವುದೇ ಒಡವೆಗಳು ಇರುವುದಿಲ್ಲ.  ನಾವು ಎದುರುದಾರರಿಗೆ ಒಂದು ಬೆಳ್ಳಿಯ ಚಂಬು ಮತ್ತು ತಟ್ಟೆಯನ್ನು ನೀಡಿರುತ್ತೇವೆ.

**3**. ನಮ್ಮ ಅಕ್ಕನ ಮದುವೆ 2014 ರಲ್ಲಿ ಆಗಿರುತ್ತದೆ. ದಿಃ 13-02-2018 ರಂದು ನಮ್ಮ ಅಕ್ಕ ಚೈತ್ರಾ ರವರ ಹೆಸರಿನಲ್ಲಿ ಒಡವೆಗಳನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿ. ದಿಃ 06-08-2014 ರಂದು ಜಾಯಾಲೊಕಾಸ್ ನಿಂದ ಖರೀದಿ ಮಾಡಿರುವ ಒಡವೆಗಳನ್ನು ರಸೀದಿಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ದಿಃ 16-08-2014 ರಂದು ನಮ್ಮ ತಂದೆಯ ಹೆಸರಿನಲ್ಲಿ ಒಡವೆಗಳನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿ.

4. ದಿಃ 26-11-2018 ರಂದು ಜಾಯಾಲೊಕಾಸ್ ನಿಂದ ನಮ್ಮ ತಂದೆಯ ಹೆಸರಿನಲ್ಲಿ ಒಡವೆಗಳನ್ನು ಖರೀದಿ ಮಾಡಿರುತ್ತೆವೆ ಎಂದರೆ ಸರಿ. ದಿಃ 30-12-2015 ರಂದು ನನ್ನ ಹೆಸರಿನಲ್ಲಿ ಜಾಯಾಲೊಕಾಸ್ ಒಡವೆಗಳನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿ. ದಿಃ 23-03-2019 ರಂದ ರಸೀದಿಯಲ್ಲಿ ಯಾರ ಹೆಸರು ನಮೂದಾಗಿಲ್ಲ ಎಂದರೆ ಸರಿ. ದಿಃ 15-02-2018 ರಂದು ವೆಂಕಟೇಶ್ವರ ಚಿನ್ನದ ಅಂಗಡಿಯಿಂದ ಒಡವೆಗಳನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿ.

**5**. ನನ್ನ ಮತ್ತು ಎದುರುದಾರರ ವಿವಾಹ ಒಪ್ಪಂದವು 2018 ರ ನವೆಂಬರ್ ತಿಂಗಳಲ್ಲಿ ಆಗಿರುತ್ತದೆ. ನಾನು ಹಾಜರು ಪಡಿಸಿರುವ ರಸೀದಿಗಳು ಹಳೆಯ ರಸೀದಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ಹೆಸರಿನಲ್ಲಿ ಒಡವೆಗಳನ್ನು ಖರೀದಿ ಮಾಡಿದ್ದೇವೆ. ಆದರೆ ರಸೀದಿಗಳು ಎದುರುದಾರರ ಬಳಿ ಇರುತ್ತದೆ. ನಾನು ಹೇಳಿದಂತೆ ಎದುರುದಾರರರಿಗೆ ಯಾವುದೇ ಚಿನ್ನ ಮತ್ತು ವರದಕ್ಷಿಣೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

6. ನಮ್ಮ ತಂದೆಯ ಹೆಸರಿನಲ್ಲಿ ಸರ್ವೇ ನಂಬರ 344/4 ರಲ್ಲಿ 17 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಆರ್. ಟಿ.ಸಿ. ಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ನಮ್ಮ ತಂದೆಯ ಹೆಸರಿನಲ್ಲಿ ಸರ್ವೇ ನಂಬರ 62/2 ರಲ್ಲಿ 37½ ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಆರ್.ಟಿ.ಸಿ. ಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಡಿ-2** ಎಂದು ಗುರುತಿಸಲಾಯಿತು. ನಮ್ಮ ತಂದೆಯ ಹೆಸರಿನಲ್ಲಿ ಸರ್ವೇ ನಂಬರ 67/2 ರಲ್ಲಿ 34½ ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಆರ್.ಟಿ.ಸಿ. ಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಡಿ-3** ಎಂದು ಗುರುತಿಸಲಾಯಿತು.

**7.** ನಮ್ಮ ತಾತನ ಹೆಸರಿನಲ್ಲಿ ಸರ್ವೇ ನಂಬರ 198/2 ಬಿ2 ರಲ್ಲಿ 22 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಆರ್.ಟಿ.ಸಿ. ಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಸದರಿ ಜಮೀನುಗಳು ಚೇರನಹಳ್ಳಿ ಕೆ ಆರ್ ನಗರಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ಸದರಿ ನಿಡಿ 4 ರ ಜಮೀನು 2 ಲಕ್ಷ ಬೆಲೆ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಸರ್ವೇ ನಂಬರ 84/2 ಬಿ1 ರಲ್ಲಿ 15 ½ ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಆರ್. ಟಿ.ಸಿ. ಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಡಿ-5** ಎಂದು ಗುರುತಿಸಲಾಯಿತು.

**8.** ನಮ್ಮ ತಾತನ ಹೆಸರಿನಲ್ಲಿ ಸರ್ವೇ ನಂಬರ 198/2ಎ ರಲ್ಲಿ 1 ಎಕರೆ 7 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಆರ್. ಟಿ.ಸಿ. ಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಡಿ-6** ಎಂದು ಗುರುತಿಸಲಾಯಿತು. ನಮ್ಮ ತಾತನ ಹೆಸರಿನಲ್ಲಿ ಸರ್ವೇ ನಂಬರ 48/1ಬಿ ರಲ್ಲಿ 38 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಆರ್. ಟಿ.ಸಿ. ಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಡಿ-7** ಎಂದು ಗುರುತಿಸಲಾಯಿತು.

**9.** ಕೆ. ಆರ್ ನಗರದಲ್ಲಿ ನಮಗೇ ಸೇರಿದ 5 ಮನೆಗಳಿವೆ ಅವುಗಳನ್ನು ಬಾಡಿಗೆ ಕೊಟ್ಟಿರುತ್ತೇವೆ. ಸಾಕ್ಷಿ ಮುಂದುವರೆದು ಸದರಿ ಮನೆಗಳನ್ನು ನಾನು ಭೋಗ್ಯಕ್ಕೆ ನೀಡಿರುತ್ತೇವೆ. ಸದರಿ ಎಲ್ಲಾ ಜಮೀನುಗಳ ಮತ್ತು ಆಸ್ತಿಗಳು ನಮ್ಮ ತಾತನ ಆಸ್ತಿಗಳು ಎಂದರೆ ಸರಿ. ಸದರಿ ಸ್ವತ್ತುಗಳಲ್ಲಿ ನನಗೆ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ನನಗೆ ಕಾನೂನಾತ್ಮಕವಾಗಿ 1/3 ನೇ ಭಾಗಾಂಶದ ಹಕ್ಕು ಇದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನಾನು ಆರೋಗ್ಯವಾಗಿದ್ದೇನೆ ಎಂದರೇ ಸರಿ. ನಾನು ದ್ವಿತೀಯ ಪಿ ಯು ಸಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಓದಿರುವ ವಿದ್ಯಾಭ್ಯಾಸಕ್ಕೆ ನನಗೆ ಯಾವುದೇ ಕೆಲಸ ಸಿಗುವುದಿಲ್ ನನಗೆ ಕೆಲಸ ಮಾಡುವ ಕ್ಷಮತೆ ಮತ್ತು ಅರ್ಹತೆ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೀವನವನ್ನು ಸಾಗಿಸಲು ಬೇಕಾಗುವಷ್ಟು ಆದಾಯವನ್ನು ಗಳಿಸುವ ಸಾಮರ್ಥ್ಯ ನನಗೆ ಇದೆ ಎಂದರೆ ಸರಿಯಲ್ಲ.

**11.** ನಾನು ಸಲ್ಲಿಸಿರುವ ಫೋಟೋಗಳಲ್ಲಿ ಎದುರುದಾರರಿಗೆ ಒಡವೇಗಳನ್ನು ನೀಡುತ್ತಿರುವ ಬಗ್ಗೆ ಯಾವುದೇ ಸೂಚನೆ ಇರುವುದಿಲ್ಲ ಎಂದರೆ ಸಾಕ್ಷಿ ಹಾಕಿರುತ್ತೇವೆ ಆದರೆ ಫೋಟೊ ತೆಗೆದಿರುವುದಿಲ್ಲ. ನಾವು ಎದುರುದಾರರರಿಗೆ ಯಾವುದೇ ಒಡವೆಗಳನ್ನು ನೀಡದೆ ಇದ್ದರೂ ಸಹ ಪ್ರಕರಣವನ್ನು ಬಲಪಡಿಸುವ ಸಲುವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಪ್ರಸ್ತುತ ಮೀನು ಸಾಗಾಣಿಕೆ ಫಾರ್ಮ ನ್ನು ಮಾಡಿರುತ್ತಾರೆ. ಅದೇ ರೀತಿ ಅವರು ಫೈನಾನ್ಸ ಕಂಪನಿಯನ್ನು ಹೊಂದಿರುತ್ತಾರೆ. ಫೈನಾನ್ಸ ಕಂಪನಿಯನ್ನು ಹೊಂದಿರುವ ಕುರಿತು ದಾಖಲೆಯನ್ನು ಸಲ್ಲಿಸಿರುವುದಿಲ್ಲ.

**12.** ಎದುರುದಾರರು ಯಾವುದೇ ಮೀನುಸಾಕಾಣಿಕೆ ಫಾರ್ಮನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೀನುಸಾಕಾಣಿಕೆ ಕುರಿತು ದಾಖಲೆಯನ್ನು ನೀಡಿರುತ್ತೇನೆ. ಎದುರುದಾರರು ಯಾವುದೇ ಗ್ರಾನೈಟ್ ಬಿಸನೆಸ್ ನ್ನು ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಆ ಕುರಿತು ದಾಖಲೆಯನ್ನು ನೀಡಿರುತ್ತೇನೆ. ನನ್ನ ಜೀವನವನ್ನು ಸಾಗಿಸುವಷ್ಟು ಸಾಮರ್ಥ್ಯ ಇದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅತ್ತೆ ಮಾವನ ಜೊತೆ ಇರಲು ಇಷ್ಟ ಪಡದ ಕಾರಣ ಅವರ ಮೇಲೆ ಸುಳ್ಳು ಆರೋಪ ಮಾಡಿ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇವತ್ತಿಗೂ ಸಹ ನಾನು ಅತ್ತೆ ಮಾವನ ಜೊತೆ ಜೀವನವನ್ನು ನಡೆಸಲು ಸಿದ್ಧಳಿದ್ದೇನೆ.

**13.** ನಾನೇ ಎದುರುದಾರರಿಗೆ ಮತ್ತು ಅವರ ತಂದೆ ತಾಯಿಗೆ ಗೌರವವನ್ನು ನೀಡದೆ ಅವರನ್ನು ನಿಂದಿಸಿ ನಾನೇ ಮನೆ ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ಅಕ್ಕ ಮತ್ತು ತಂದೆ ತಾಯಿ ಹೊಡೆದು ನನ್ನನ್ನು ನಮ್ಮ ತವರು ಮನೆಗೆ ಕಳುಹಿಸಿ ಕೊಟ್ಟಿರುತ್ತಾರೆ. ನಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನಾನು ಎದುರುದಾರರ ಮತ್ತು ಅವರ ಕುಟುಂಬಸ್ಥರ ಮೇಲೆ ಯಾವುದೇ ದೂರನ್ನು ಕೊಟ್ಟಿಲ್ಲ ಸಾಕ್ಷಿ ಮುಂದುವರೆದು ಎದುರುದಾರರು ಸರಿಹೋಗಬಹುದು ಎಂದು ಯಾವುದೇ ದೂರನ್ನು ನೀಡಿರುವುದಿಲ್ಲ.

14\. ಎದುರುದಾರರ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಯನ್ನು ಪಡೆದಿದ್ದೇನೆ ದಾಖಲೆಗಳು ಎದುರುದಾರರ ಮನೆಯಲ್ಲಿವೆ. ನಾನು ಕನಕಪುರದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಆ ಕುರಿತು ಆಸ್ಪತ್ರೆಯಿಂದ ದಾಖಲೆಗಳನ್ನು ತಂದು ಸಲ್ಲಿಸಲು ತೊಂದರೆ ಇಲ್ಲ. ನಾನು ಹೇಳಿದಂತೆ ಎದುರುದಾರರು ನನಗೆ ಯಾವುದೇ ಹಲ್ಲೆ ಮಾಡಿ ಹಿಂಸೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**15.** ನಾನು ಕನಕಪುರದ ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡರು ಸಹ ದುರುದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಉದ್ದೇಶ ಎದುರುದಾರರನ್ನು ಅವರ ತಂದೆ ತಾಯಿ ಮತ್ತು ಅಕ್ಕರಿಂದ ದೂರ ಮಾಡಿ ಭಾಗಾಂಶವನ್ನು ಪಡೆದುಕೊಂಡು ನಮ್ಮ ಜೊತೆ ಬಂದು ನೆಲೆಸುವಂತೆ ಮಾಡುವುದು ಎಂದರೆ ಸರಿಯಲ್ಲ.

16. ಕೋರೆ ಆಸ್ತಿಯು ಎದುರುದಾರರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಉಳಿದ ಆಸ್ತಿಯು ಎದುರುದಾರರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಕೋರೆ ಆಸ್ತಿಯು 2 ಎಕರೆ ಇದೆ. ನನ್ನ ಗಂಡನಿಗೆ ಕೇವಲ 20 ಗುಂಟೆ ಮಾತ್ರ ಭಾಗಾಂಶದ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರಿಗೆ ನಾನು ಕೇಳಿದಂತೆ ತಿಂಗಳಿಗೆ 50 ಸಾವಿರ ಜೀವನಾಂಶವನ್ನು ಕೊಡುವ ಶಕ್ತಿ ಇಲ್ಲ ಎಂದರೆ ಸರಿಯಲ್ಲ. ಎದುರದಾರರಿಗೆ ಮಾಸಿಕವಾಗಿ ಕೇವಲ 9 ಸಾವಿರ ಗಳಿಸಲು ಶಕ್ತರಾಗಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರ ಆರೋಗ್ಯ ಸರಿಯಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ